

# ಪವಿತ್ರತೆ ಮತ್ತು ಸಂಸ್ಕಾರ

- ಪುಷ್ಪಾ ಶೇಷಾದ್ರಿ

ಆಧ್ಯಾತ್ಮ ಜೀವನದ ಅನಿವಾರ್ಯ ಅಂಗವೇ ಪಾವಿತ್ರ್ಯ ಮತ್ತು ಮನಶ್ಶುದ್ಧಿ. ಈ ವಿಚಾರವಾಗಿ ಶಾಸ್ತ್ರಗ್ರಂಥಗಳು ಮತ್ತು ನಮ್ಮ ಪರಂಪರೆಯ ಸಾಧುಸಂತರು ಸ್ಪಷ್ಟವಾಗಿ ಹಲವು ಮೌಲಿಕವಾದ ವಿಚಾರಗಳನ್ನು ತಿಳಿಸಿಕೊಡುತ್ತಾರೆ. ಈ ವಿಷಯದ ಬಗ್ಗೆ ಬೆಳಕು ಚೆಲ್ಲುವ ಈ ಲೇಖನವನ್ನು ಬರೆದ ಲೇಖಕಿ ಮೈಸೂರಿನ ನಿವಾಸಿಹಾಗೂ ಆಶ್ರಮದ ಭಕ್ತರು. ಸರಳ ಹಾಗೂ ಸುಲಲಿತ ಶೈಲಿಯಲ್ಲಿ ಬರೆಯುವ ಅವರ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

**ಪ**ವಿತ್ರತೆ ಎಂದರೆ ಶುದ್ಧತೆ. ಒಂದು ಬಿಳಿಯ ಬಟ್ಟೆಯ ಮೇಲೆ ಒಂದು ಸಣ್ಣ ಕಪ್ಪು ಕಲೆ ಇದ್ದರೆ, ಅದು ಎದ್ದು ಕಾಣುವುದು. ಅಂತೆಯೇ ನಮ್ಮ ಮನದಲ್ಲಿ ಏನಾದರೂ ಬೇಡದ ವಿಚಾರಗಳು ತುಂಬಿದ್ದರೆ, ಅದು ನಮ್ಮ ಅಪವಿತ್ರತೆಯನ್ನು ಎತ್ತಿ ತೋರಿಸುವುದು. ಮನದಲ್ಲಿ ಕಾಯಾ, ವಾಚಾ, ಮನಸಾ ಶುದ್ಧತೆ ಇದ್ದರೆ ಅದು ಪವಿತ್ರವೆನಿಸುವುದು.

ಮುಖ್ಯವಾಗಿ, ನಮ್ಮ ಆಲೋಚನೆಗಳ ಮೇಲೆ ಗಮನವಿಡ ಬೇಕು. ಉಪಯೋಗಕ್ಕೆ ಬಾರದ ಯೋಚನೆ, ವಿಚಾರಗಳನ್ನು ಹೊರ ಹಾಕಬೇಕು. ನಾವು ಎಷ್ಟು ಒಳ್ಳೆಯ ಆಲೋಚನೆ ಮಾಡಿದೆವು ಎಂಬ ಲೆಕ್ಕವನ್ನು ಪ್ರತಿದಿನ ಮಾಡುತ್ತಾ ಬಂದರೆ ಕ್ರಮೇಣ ಉಪಯೋಗ ವಿಲ್ಲದ ವಿಚಾರಗಳು ಕಡಿಮೆಯಾಗುತ್ತಾ ಬರುವವು, ಮತ್ತು ಮನಸ್ಸು ಪವಿತ್ರತೆಯ ಮೂಲಕ ಸಾಗುವುದು. ಇದರಿಂದ ನಾವು ಮಾಡುವ ಕಾರ್ಯ, ಆಡುವ ಮಾತು ಸಹ ಪವಿತ್ರವಾಗುವುದು.

ಅಶುದ್ಧ, ಅನಿಷ್ಟ ವಿಷಯಗಳನ್ನು ಚಿಂತಿಸುತ್ತಿದ್ದರೆ, ಕ್ರಮೇಣ ಅದು ನಮ್ಮ 'ಸಂಸ್ಕಾರ'ದ ಮೇಲೆ ಬಲವಾದ ಪರಿಣಾಮ ಬೀರು ವುದು. ಇದರಿಂದ ಮನದ ನೆಮ್ಮದಿಯೂ ಕೆಡುವುದು. ಸದ್ಭಾವನೆ, ಸತ್ಕರ್ಮಗಳ ಕಡೆ ಗಮನವಿಡಬೇಕಾದರೆ ಮನದ ಪವಿತ್ರತೆ ಬಹಳ ಮುಖ್ಯ.

ಪವಿತ್ರತೆ ಎಂದರೆ, ಮನಸ್ಸು, ದೇಹ, ಇಂದ್ರಿಯಗಳ ಶುದ್ಧಿ. ದೇಹವನ್ನು ಶುಚಿಯಾಗಿಡಲು ಸುಗಂಧಭರಿತ ಸಾಬೂನನ್ನು ಉಪ ಯೋಗಿಸಿ ಸ್ನಾನ ಮಾಡುವಂತೆ, ಮನಸ್ಸನ್ನು ಶುಚಿಯಾಗಿಡಲು, ಒಳ್ಳೆಯ ಆಲೋಚನೆಗಳು ಬೇಕು. ಇದಕ್ಕೆ ಶಿಸ್ತಿನ ಜೀವನ ನೆರವಾಗು ವುದು.

ರಾಮಕೃಷ್ಣ ಪರಮಹಂಸರ ಹೇಳಿಕೆಯಂತೆ, ದೋಣಿ ನೀರಿನ ಮೇಲಿರಬೇಕು, ಆದರೆ ನೀರು ದೋಣಿಯ ಒಳಗೆ ಇರಬಾರದು. ಅಂದರೆ, ನಾವು ಪ್ರಪಂಚದಲ್ಲಿರಬೇಕು, ಆದರೆ ಪ್ರಾಪಂಚಿಕ ವಿಷಯ ದಲ್ಲಿ ನಮ್ಮ ಮನಸ್ಸು ಹತೋಟಿಯಲ್ಲಿರಬೇಕು. ಮಾನವನು ಸ್ವರೂ ಪತಃ ಪವಿತ್ರತೆಯನ್ನು ಹೊಂದಿರುವನು. ಆದರೆ ಅಜ್ಞಾನದಲ್ಲಿ ಸಿಲುಕಿ, ತನ್ನ ನೈಜಸ್ವರೂಪವನ್ನು ಮರೆತಿರುವನು. ಅದರಿಂದ ಹೊರ ಬರಬೇಕಾದರೆ ಸತ್ಸಂಗ, ಧ್ಯಾನ, ಪವಿತ್ರವಾದ ಜೀವನ ನಡೆಸ ಬೇಕಾ ಗುವುದು. ಇದರಿಂದ ಆಧ್ಯಾತ್ಮಿಕ ಹಾದಿ ಸುಗಮವಾಗುವುದರಲ್ಲಿ ಸಂದೇಹವಿಲ್ಲ.

ಕರ್ಮ ಅಥವಾ ಕೆಲಸ ಮಾಡುವಾಗ ನಾವು ಮಾಡುತ್ತಿರುವುದು 'ಸರಿಯೇ' ಎಂದು ಗಮನವಿಡಬೇಕು. ಆದರೆ ಅದರ ಫಲದ ಕಡೆ ಗಲ್ಲ. ಅದೇ 'ಕರ್ಮಯೋಗ'ವೆನಿಸುವುದು. ಪತಂಜಲಿ ಹೇಳಿರು ವಂತೆ ಅಹಿಂಸೆ, ಬ್ರಹ್ಮಚರ್ಯ, ಸತ್ಯಸಂಧತೆಯನ್ನು ಪಾಲಿಸಬೇಕು. ನಾವು ಪರರಲ್ಲಿ ಕೆಟ್ಟದ್ದನ್ನು ಗಮನಿಸದೇ, ಅವರಲ್ಲಿರುವ ಒಳ್ಳೆಯ ಸ್ವಭಾವವನ್ನು ವೀಕ್ಷಿಸಬೇಕು. ಇದರಿಂದ ಸಕಾರಾತ್ಮಕ ಭಾವನೆ ವೃದ್ಧಿಸುವುದು.

**ಮುಸುರೆ ತೊಳೆಯಬೇಕೋ ಈ ಮನಸಿನಾ ॥ ೧ ॥**
**ಮುಸುರೆ ತೊಳೆಯಬೇಕು, ಕುಸು, ಕುಸು ಬಿಡಬೇಕು**

'ಈಶ ಪ್ರೇರಣೆ ಎಂಬ ಹೇಮಾ ನದಿಯಲ್ಲಿ ಮುಸುರೆ ತೊಳೆಯ ಬೇಕು' ಎಂದು ಅನೇಕ ವರ್ಷಗಳ ಹಿಂದೆಯೇ ದಾಸರು ಹಾಡಿ ತೋರಿಸಿರುವರು.

ನಮ್ಮ ಮನದ ಕೊಳೆ, ಕ್ಲೇಶಗಳನ್ನು ತೊಳೆದುಹಾಕಬೇಕು. ಹಿಂದಿನ ಕಾಲದಲ್ಲಿ ಮುಸುರೆ ತೊಳೆಯಬೇಕಾದರೆ, ಬೂದಿಯನ್ನು



ಉಪಯೋಗಿಸುತ್ತಿದ್ದರು. ಅಂತೆಯೇ, ಮನದ ಮುಸುರೆ ತೊಳೆಯ ಬೇಕಾದರೆ, ಸಜ್ಜನಸಂಗ, ಧ್ಯಾನ, ಜಪ, ಸತ್ಕಾರ್ಯ ಆವಶ್ಯಕ. ಮನಸ್ಸಿನ ಪವಿತ್ರತೆಗೆ ಇದೂ ಒಂದು ಮಾರ್ಗ.

ಕರ್ತವ್ಯವನ್ನು ಮಾಡುತ್ತಾ ಇದ್ದರೆ ಅದೇ ಕರ್ಮವೆನಿಸುವುದು. ಕ್ರಮೇಣ ಕರ್ತವ್ಯವೇ ಸಂಸ್ಕಾರವಾಗಿ ಮಾರ್ಪಾಟಾಗುವುದು.

**ಸಂಸ್ಕಾರವೆಂದರೆ**

|

| **ಮನಸ್ಸು** | **ಬುದ್ಧಿ** | **ಕರ್ಮ** |
|---|---|---|
| \| | \| | \| |
| **ಯೋಚನೆಗಳು** | **ವಿವೇಕ, ವಿಚಾರ** | **ಕರ್ತವ್ಯ** |

– ಇವೇ ಸಂಸ್ಕಾರವೆನಿಸುವುದು. ಅದು, ಮಾನವನು ಜನ್ಮ, ಜನ್ಮಾಂತರದಿಂದ ಕೂಡಿ ಹಾಕಿಕೊಂಡು ಬಂದಿರುವ ವಾಸನೆ. ಅದು ಒಳ್ಳೆಯದೇ ಇರಬಹುದು, ಅಥವಾ ಕೆಟ್ಟದ್ದೇ ಇರಬಹುದು.

ಪ್ರತಿ ದಿನ ನಾವು ಮಾಡುವ ಕೆಲಸ, ಚಿಂತನೆ (ಯಾವುದೇ ಆಗಲಿ) ನಮ್ಮ ಒಳ-ಮನದಲ್ಲಿ (sub-concious) ಒಂದು ಮುದ್ರೆಯಾಗಿ (imprint) ಪರಿಣಮಿಸುವುದು. ಅಂದರೆ ನಮ್ಮ ಕರ್ಮ, ಆಲೋಚನೆಗಳು ಸುಪ್ತ ಮನದಲ್ಲಿ ಬೀಜ ಬಿತ್ತಿ ಬಿಡುವುದು. ಆದ್ದರಿಂದ ಏನೇ ಮಾಡಿದರೂ, ಎಚ್ಚರಿಕೆಯಿಂದಿರಬೇಕು. ಏಕೆಂದರೆ, ಬೀಜ ಬಿತ್ತಿದಂತೆ ಫಲ. ಮರಣದ ನಂತರ, ಜೀವವು ಈ ಸಂಸ್ಕಾರದ ಗಂಟನ್ನು ಹೊತ್ತು ಮತ್ತೊಂದು ಜನ್ಮದಲ್ಲಿ ಅದರ ಫಲವನ್ನು ಅನುಭವಿಸಿಯೇ ತೀರಬೇಕು.

ಒಬ್ಬ ವ್ಯಕ್ತಿ ಸಾಯುವಾಗ ಅವನ ಸಂಬಂಧಿಕನು, ''ಅವನು ಏನೇನು ಸೊತ್ತನ್ನು ಬಿಟ್ಟುಹೋಗಿದ್ದಾನೆ?'' ಎಂದು ಕೇಳುತ್ತಾನೆ.

ಆದರೆ ಯಮಧರ್ಮರಾಯ ಸತ್ತವನ ಕಡೆಗೆ ತಿರುಗಿ, ''ಇವನು ಏನೇನು ಒಳ್ಳೆಯ ಹಾಗೂ ಕೆಟ್ಟ ಕೆಲಸಗಳನ್ನು ಮಾಡಿದ್ದಾನೆ?'' ಎಂದು ಕೇಳುತ್ತಾನೆ.

ಈ ಜನ್ಮದಲ್ಲಿ ಭಗವಂತನು ಮಾನವನಿಗೆ 'ವಿವೇಕ'ಎಂಬ ಅಮೂಲ್ಯವಾದ ವರವನ್ನು ಕರುಣಿಸಿದ್ದಾನೆ. ಇಂತಹ ವಿವೇಕ, ವಿಚಾರ ಮಾಡುವ ಸಾಧ್ಯತೆ ಪ್ರಾಣಿ, ಗಿಡ, ಮರಗಳಿಗಿಲ್ಲ. ಹಿಂದೆ ಮಾಡಿದ ಕರ್ಮಗಳಿಗೆ, ಈಗ ಅನುಭವಿಸುತ್ತಿರುವ ಸುಖ, ದುಃಖಗಳೇ ಸಾಕ್ಷಿ. ನಮ್ಮನ್ನು ನಾವು ತಿದ್ದಿಕೊಳ್ಳುವುದಕ್ಕೆ ಈ ಜನ್ಮ ಒಂದು ಕಾರಣವಾಗಿದೆ. ಆದ್ದರಿಂದ ಸಾಧ್ಯವಾದಷ್ಟು ಈ ಜನ್ಮದಲ್ಲಿ ಒಳ್ಳೆಯ ಕೆಲಸ, ಯೋಚನೆ, ಸತ್ಕಾರ್ಯಗಳನ್ನು ಮಾಡಿ, ಪವಿತ್ರಗೊಳಿಸಿಕೊಂಡು, ಉತ್ತಮ ಜೀವನಕ್ಕೆ ನಾಂದಿ ಹಾಡಬೇಕು.

ಮಾನವನು ಸ್ವಭಾವದಿಂದ ಹುಟ್ಟುವ ಕರ್ಮಕ್ಕೆ ಬಂಧಿತನಾಗುವನು. ಆ ಸ್ವಭಾವ ನಮಗೆ ಜನ್ಮ, ಜನ್ಮಾಂತರದಿಂದ ಬೆನ್ನಟ್ಟಿ ಬಂದಿರುತ್ತದೆ. ಈ ಜನ್ಮದಲ್ಲಿ ಅದು ಮುಂದುವರಿಯುವುದು. ಸಂಸ್ಕಾರವೆಂಬುದು ಜೀವನದಲ್ಲಿ ಬಹಳ ಮುಖ್ಯ ಪಾತ್ರ ವಹಿಸುವುದು. ಅದರ ಸದುಪಯೋಗದಿಂದ ನಮ್ಮನ್ನು ನಾವು ಪರಿವರ್ತನೆ ಮಾಡಿಕೊಳ್ಳಲು ಸಾಧ್ಯ.

ಪ್ರತಿಯೊಬ್ಬರಲ್ಲಿಯೂ ಅಧ್ಯಾತ್ಮ ಜ್ಞಾನವೆಂಬುದು ಅಡಗಿದೆ. ಆದರೆ, ನಮ್ಮ ಅಜ್ಞಾನವೆಂಬ ಕವಚ ಮುಚ್ಚಿದೆ. ಅದನ್ನು ಚೇತನಗೊಳಿಸುವವನೇ ವಿವೇಕಿ. ಮರುಜನ್ಮದಲ್ಲಿ ಶೀಘ್ರದಲ್ಲೇ ಸಂಸ್ಕಾರದ ಬೀಜ ಮೊಳೆಯುತ್ತದೆ.

ಇಲ್ಲಿ ಶಂಕರಾಚಾರ್ಯರ ಅಧ್ಯಾತ್ಮ ಜೀವನವನ್ನು ನೆನೆಯಬಹುದು. ಅವರು ಅತಿ ಚಿಕ್ಕವಯಸ್ಸಿನಿಂದಲೇ ಅಧ್ಯಾತ್ಮ ಜ್ಞಾನವನ್ನು ಪಡೆದಿದ್ದರು.

ಈಗಿನ ಕಾಲದಲ್ಲಿ ಬಾಲಪ್ರತಿಭೆಗಳು ಬೇಕಾದಷ್ಟಿದ್ದಾರೆ. ಅವರಿಗೆ ಆ ಚಿಕ್ಕ ವಯಸ್ಸಿನಲ್ಲೇ ಆ ಒಂದು ಪಾಂಡಿತ್ಯ ಬರಬೇಕಾದರೆ, ಪೂರ್ವಜನ್ಮದ ಸಂಸ್ಕಾರ ಇದ್ದೇ ಇರಬೇಕು. ಉದಾಹರಣೆ: ಮ್ಯಾಂಡೋಲಿನ್ ಶ್ರೀನಿವಾಸ್, ಎಂ.ಎಸ್. ಸುಬ್ಬಲಕ್ಷ್ಮಿ ಇತ್ಯಾದಿ. ಅವರು ಚಿಕ್ಕಂದಿನಿಂದಲೇ ಸಂಗೀತದಲ್ಲಿ ಪರಿಣತರಾಗಿದ್ದರು. ಅತಿ ಜಿಪುಣನಾಗಿದ್ದ ನವಕೋಟಿನಾರಾಯಣ, ಒಂದೇ ಕ್ಷಣದಲ್ಲಿ ಎಲ್ಲವನ್ನೂ ತ್ಯಾಗಮಾಡಿ, ಪುರಂದರದಾಸರಾಗಿದ್ದನ್ನೂ ಇಲ್ಲಿ ನೆನೆಯಬಹುದು.

'ಮಾನವನ ಜನ್ಮ ದೊಡ್ಡದು, ಅದನ್ನು ಹಾನಿಗೊಳಿಸಬೇಡಿ ಹುಚ್ಚಪ್ಪಗಳಿರಾ' ಎಂಬ ದಾಸರ ಹೇಳಿಕೆಯಂತೆ, ನಾವೆಲ್ಲರೂ ಪವಿತ್ರತೆಯನ್ನು ಹೊಂದಲು ಪ್ರಯತ್ನಿಸೋಣ. ಒಳ್ಳೆಯ ಸಂಸ್ಕಾರವನ್ನು ಉತ್ತಮಗೊಳಿಸಲು, ಈಗ ನಮಗೆ ಒದಗಿ ಬಂದಿರುವ ಸದವಕಾಶಗಳನ್ನು ಉಪಯೋಗಿಸಿಕೊಂಡು, ಮುಂದಿನ ಜನ್ಮಕ್ಕೆ ನಾಂದಿ ಹಾಡೋಣ.

## ಪರಿಶುದ್ಧತೆ ಹಾಗೂ ಗ್ರಹಣಶಕ್ತಿ

ನಮ್ಮ ಮನಸ್ಸು ಎಷ್ಟು ಪರಿಶುದ್ಧವಾಗಿರುವುದೋ ನಮ್ಮ ತಿಳುವಳಿಕೆಯೂ ಅಷ್ಟೇ ಸ್ಪಷ್ಟವಾಗಿರುವುದು. ಒಬ್ಬನ ಮುಖವೇ ಅವನ ಮನಸ್ಸು ಯಾವ ಅವಸ್ಥೆಯಲ್ಲಿದೆ ಎಂಬುದನ್ನು ಸೂಚಿಸುವುದು. ಮನಸ್ಸು ಸ್ವಚ್ಛವಾಗಿದ್ದಷ್ಟೂ ಅದಕ್ಕೆ ಇತರರ ಆಲೋಚನೆಗಳನ್ನು ಗ್ರಹಿಸುವ ಶಕ್ತಿ ಬರುವುದು. ಇದು ರೇಡಿಯೋ ತರಂಗಗಳನ್ನು ಗ್ರಹಿಸಿದಂತೆ. ಮನಸ್ಸಿನಲ್ಲಿ ಏಳುವ ಪ್ರತಿಯೊಂದು ಆಲೋಚನೆಯೂ ಒಂದೊಂದು ಕಂಪನವನ್ನು ಉಂಟುಮಾಡುವುದು. ಉತ್ತಮ ಗ್ರಹಣಶಕ್ತಿ ಯಿರುವ ಮನಸ್ಸು ಆ ಕಂಪನವನ್ನು ಗ್ರಹಿಸುವುದು ಹಾಗೂ ಅದು ಏಳಲು ಕಾರಣವಾದ ಆಲೋಚನೆಯನ್ನು ಅರಿತುಕೊಳ್ಳುವುದು. ಇದಕ್ಕೆ ಅಗತ್ಯವಾಗಿ ಬೇಕಾಗಿರುವುದೆಂದರೆ ಮಾನಸಿಕ ಪರಿಶುದ್ಧತೆಯೊಂದೇ.

– ಸ್ವಾಮಿ ವಿಜ್ಞಾನಾನಂದ